**ಮೂಲ ದಾವಾ ನಂಃ 42/2014**

**ಪಿ ಡಬ್ಲ್ಯು 1**

**(ಇಂದು ದಿನಾಂಕಃ 09.01.2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ 9 ರಿಂದ 13 ರ ಪ್ರತಿವಾದಿ ಪರ ವಕೀಲರಾದ ಶ್ರೀಮತಿ ಎ ಎಂ ಜಿ ರವರಿಂದಃ**

ಈ ದಾವೆಯಲ್ಲಿ ಯಾರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂಬುದನ್ನು ಹೇಳಬಹುದೇ ಎಂದರೆ ಸಾಕ್ಷಿ ಹೇಳಬಹುದು ಅಂತಾ ಉತ್ತರಿಸುತ್ತಾರೆ. ಯಾರನ್ನೆಲ್ಲಾ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಸಾಕ್ಷಿ ನನ್ನ ತಾಯಿ ಕಾವೇರಿ, ಗಂಗಾಧರ, ಗಣಪತಿ, ಯಮುನರವರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಅಂತಾ ಉತ್ತರಿಸುತ್ತಾರೆ. ಇನ್ನು ಯಾರನ್ನು ಪಕ್ಷಗಾರರನ್ನು ಮಾಡಲಾಗಿದೆ ಎಂಬುದು ನೆನಪಿಗೆ ಬರುತ್ತಿಲ್ಲ. ನೀವು ಮೇಲೆ ಹೇಳಿದ ವ್ಯಕ್ತಿಗಳು ಈಗಾಗಲೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರು ತೀರಿಕೊಂಡ ನಂತರ ಅವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸಾಕ್ಷಿ ಗಂಗಾಧರನ ಮಗ ಶಿವನಾಥನನ್ನು, ಗಣಪತಿಯ ಮಗಳು ಮುಕ್ತಾಳನ್ನು, ಪಕ್ಷಗಾರರನ್ನಾಗಿ ಮಾಡಲಾಗಿದೆ ಅಂತಾ ಉತ್ತರಿಸುತ್ತಾರೆ.

2. ನಿಮ್ಮ ತಂದೆ ಜೀವಂತ ಇರುವಾಗ ನೀವು ಹಾಗೂ ನಿಮ್ಮ ಸಹೋದರ ಸಹೋದರಿಯರು ಸೇರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದೆವು ಎಂದರೆ ಸರಿ. ದಾವಾ ಜಮೀನು ಹೊರತುಪಡಿಸಿ ಬೇರೆ ಜಮೀನುಗಳು ಇದ್ದವು ಎಂದರೆ ಸರಿ. ನಿಮ್ಮ ತಂದೆಯ ಜೀವಿತಾವಧಿಯಲ್ಲಿ ನಿಮ್ಮೊಳಗೆ ಸದ್ರಿ ಜಮೀನುಗಳ ಬಾಬ್ತು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ಇನ್ನು ಕೆಲವು ಜಮೀನುಗಳು ಪೋಲೀಸರ ವಸತಿ ಗೃಹಕ್ಕೆ ಭೂ ಸ್ವಾಧೀನಗೊಂಡಿರುತ್ತದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಪರಿಹಾರ ಪಡೆದುಕೊಂಡಿದ್ದು ಇದೆ ಎಂದರೆ ಸಾಕ್ಷಿ ನಾವು ಪಡೆದುಕೊಂಡಿಲ್ಲ ಅಂತಾ ಉತ್ತರಿಸುತ್ತಾರೆ. ಸದ್ರಿ ಜಮೀನುಗಳಲ್ಲಿ ನಿಮಗೂ ನಿಮ್ಮ ಸಹೋದರ ಸಹೋದರಿಯರಿಗೂ ಹಾಗೂ ಅವರ ವಾರಸುದಾರರಿಗೆ ಸಮಾನ ಹಿಸ್ಸೆ ಇದೆ ಎಂದರೆ ಸರಿ. ಸ್ವಲ್ಪ ಜಮೀನನ್ನು ಮುಕ್ತಾರವರ ತಂದೆ ಗಣಪತಿ ಹಾಗೂ ಮುಕ್ತಾರವರು ಹಾಗೂ ಅವರ ಸಹೋದರ ಸಹೋದರಿಯರು ಮಾರಾಟ ಮಾಡಿದ ಜಮೀನಿನಲ್ಲಿ ನಿಮಗೆ ಯಾರಿಗೂ ಪಾಲನ್ನು ಕೊಟ್ಟಿಲ್ಲ ಎಂದರೆ ಸರಿ.

**ಮೂಲ ದಾವಾ ನಂಃ 42/2014**

**ಪಿ ಡಬ್ಲ್ಯು 1**

3. ಇನ್ನು ಕೆಲವು ಜಮೀನಿಗೆ ಸಂಬಂಧಿಸಿದಂತೆ ಸರಕಾರದಿಂದ ಪರಿಹಾರದ ಹಣ ಬರಲು ಇನ್ನು ಬಾಕಿ ಇದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವೆಂಕಟೇಶ ಬಾಬು ಭಂಡಾರಿಯವರ ವಾರಸುದಾರರರಿಗೆ ಸಮಪಾಲು ಇದೆ ಎಂದರೆ ಸರಿ.

**ಪಾಟೀ ಸವಾಲುಃ 2 ರಿಂದ 7 ರ ಪ್ರತಿವಾದಿ ಪರ ವಕೀಲರಾದ ಶ್ರೀಮತಿ ಎಸ್ ಎಸ್ ಆರ್ ರವರಿಂದಃ**

4. ನಾನು ಓದು ಬರಹ ಕಲಿತವಳಲ್ಲ. ನಾನು ಶಾಲೆಗೆ ಹೋದವಳಲ್ಲ. ಈ ದಾವೆ ಹೂಡಲು ನಿಮಗೆ ಮಾಹಿತಿ ಯಾರು ಕೊಟ್ಟರು ಎಂದರೆ ಸಾಕ್ಷಿ ನನ್ನ ತಂದೆ ಕೊಟ್ಟಿದ್ದರು ಅಂತಾ ಉತ್ತರಿಸುತ್ತಾರೆ. ಈ ದಾವೆ ಏಕೆ ಸಲ್ಲಿಸಿದ್ದು ಎಂದರೆ ನಮಗೆ ಹಣ ಸಿಗಬೇಕು ಅಂತಾ ಸಲ್ಲಿಸಿದ್ದು ಅಂತಾ ಉತ್ತರಿಸುತ್ತಾರೆ. ದಾವಾ ಜಮೀನುಗಳ ಸರ್ವೆ ನಂಬರುಗಳನ್ನು ಹೇಳಬಹುದೇ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ದಾವಾ ಜಮೀನುಗಳು ಎಲ್ಲಿವೆ ಎಂದರೆ ಸಾಕ್ಷಿ ಗೊತ್ತಿದೆ ಆದರೂ ಈಗ ಹೇಳಲು ಆಗುವುದಿಲ್ಲ ಅಂತಾ ಉತ್ತರಿಸುತ್ತಾರೆ. ದಾವಾ ಜಮೀನುಗಳ ಚೆಕ್ಕು ಬಂದಿಗಳನ್ನು ಹೇಳಬಹುದೇ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ನೀವು ದಾವಾ ಜಮೀನುಗಳನ್ನು ನೋಡಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ವೆಂಕಟೇಶ ಗಣಪತಿ ಕಲ್ಲುಟ್ಕರ, ಹಾಗೂ ಇತರೆ ಪ್ರತಿವಾದಿಗಳಿಗೆ ಎಷ್ಟು ಮಕ್ಕಳು ಎಂಬುದನ್ನು ಹೇಳಬಹುದೇ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಅಂತಾ ಉತ್ತರಿಸುತ್ತಾರೆ. ವೆಂಕಟೇಶ ಗಣಪತಿ ಕಲ್ಗುಟ್ಕರ್ ನಿಮಗೆ ಸಂಬಂಧಿಕರೇ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ.

5. ವೆಂಕಟೇಶ್ ಬಾಬು ಭಂಡಾರಿಯವರಿಗೆ ಎಷ್ಟು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಬಾಬು ಯಾವಾಗ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಬಾಬುರವರ ವಾರಸುದಾರರು ಯಾರು ಎಂದರೆ ನನಗೆ ಗೊತ್ತಿಲ್ಲ. ಗಂಗಾಧರ ಯಾವಾಗ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಅವರ ವಾರಸುದಾರರು ಯಾರು ಎಂದರೆ ನನಗೆ ಗೊತ್ತಿಲ್ಲ. ಯಮುನ ಯಾವಾಗ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ ಅವರ ವಾರಸುದಾರರು ಯಾರು ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಕಾವೇರಿ ಯಾವಾಗ ತೀರಿಕೊಂಡರು ಹಾಗೂ ಅವರ ವಾರಸುದಾರರು ಯಾರು ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮೂಲ ದಾವಾ ನಂಃ 42/2014**

**ಪಿ ಡಬ್ಲ್ಯು 1**

6. ದಾವಾ ಜಮೀನು ಯಾವ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ನಾನು ಪಕ್ಷಗಾರಳಾಗಿದ್ದೆ. ಸದ್ರಿ ಪ್ರಕರಣದಲ್ಲಿ ಯಾರೆಲ್ಲಾ ಭಾಗಿಯಾಗಿದ್ದರು ಎಂದರೆ ಸಾಕ್ಷಿ ಗಣಪತಿ, ಗಂಗಾಧರರವರು ಭಾಗಿಯಾಗಿದ್ದರು ಅಂತಾ ಉತ್ತರಿಸುತ್ತಾರೆ. ನೀವು ಕಲ್ಲುಟ್ಕರರವರ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವೆಯಲ್ಲಿ ಏನೆಲ್ಲಾ ಆಗುತ್ತಿದೆ ಎಂಬ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರಕಾರದವರು ಜಮೀನನ್ನು ಹೇಗೆ ಸ್ವಾಧೀನಪಡಿಸಿಕೊಂಡರು ಎಂಬ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದ್ರಿ ವಿಷಯ ನಿಮಗೆ ಹೇಗೆ ಗೊತ್ತಾಯ್ತು ಎಂದರೆ ಸಾಕ್ಷಿ ನನ್ನ ತಾಯಿಯ ಸಹೋದರರು ನನಗೆ ಹೇಳಿದ್ದರು ಅಂತಾ ಉತ್ತರಿಸುತ್ತಾರೆ.

7. ಕಾವೇರಿ ಮತ್ತು ಯಮುನ ಯಾವಾಗ ಮದುವೆಯಾದರು ಎಂದರೆ ನನಗೆ ಗೊತ್ತಿಲ್ಲ. ಕಾವೇರಿ ಮತ್ತು ಯಮುನ ವೆಂಕಟೇಶರವರ ಮಕ್ಕಳು ಅಂತಾ ತೋರಿಸಲು ವಾರಸಾ ಸರ್ಟಿಫಿಕೇಟನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ನೀವು ಕಲ್ಲುಟ್ಕರ್ ರವರ ದಾಖಲೆಗಳನ್ನು ಬಿಟ್ಟರೆ ನಿಮ್ಮ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಲ್ಲುಟ್ಕರ್ ಹಾಗೂ ನಿಮ್ಮ ಕುಟುಂಬ ಬೇರೆ ಬೇರೆ ಎಂದರೆ ಸರಿಯಲ್ಲ. ಗಣಪತಿ ಕಲ್ಲುಟ್ಕರ ಕುಟುಂಬದವರು ಮತ್ತು ಗಂಗಾಧರನ ಕುಟುಂಬದವರು ಸೇರಿ ಭೂ ನ್ಯಾಯ ಮಂಡಳಿಯ ಮುಂದೆ ದಾವಾ ಜಮೀನಿಗೆ ಸಂಬಂಧಿಸಿದಂತೆ ಅರ್ಜಿಯನ್ನು ತುಂಬಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಗಂಗಾಧರ ಸಲ್ಲಿಸಿದ ಅರ್ಜಿ ತಿರಸ್ಕೃತಗೊಂಡು ಗಣಪತಿ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಲಾಗಿದೆ ಎಂದರೆ ಸರಿ. ಆಲಾಗಾಯ್ತು ಗಣಪತಿ ಸದ್ರಿ ಆಸ್ತಿಯನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಆ ರೀತಿ ಅವರ ಹೆಸರನ್ನು ಕಂದಾಯ ದಾಖಲೆಗಳಲ್ಲಿ ನಮೂದಿಸಿಕೊಂಡು ಬರುವಾಗ ನೀವು ತಕರಾರು ಮಾಡಿಲ್ಲ ಎಂದರೆ ಸರಿ. ಆ ರೀತಿ ತಕರಾರು ಮಾಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಅವರು ತೀರಿಕೊಂಡ ನಂತರ ಅವರ ವಾರಸುದಾರರ ಹೆಸರನ್ನು ನಮೂದಿಸಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ರಾಘವೇಂದ್ರ, ವಿನಾಯಕ, ಸಂಧ್ಯಾ, ರಾಜಶ್ರೀ,ಶ್ಯಾಮರವರ ಬಗ್ಗೆ ನನಗೆ ಗೊತ್ತಿದೆ. ಅವರೆಲ್ಲರೂ ನನ್ನ ಸಂಬಂಧಿಕರು ಎಂದರೆ ಸರಿ. ಅವರನ್ನು ದಾವೆಯಲ್ಲಿ ಏಕೆ ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂಬುದು ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ.

9.ನಿಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲದಿದ್ದರೂ ಸಹ ಕೇವಲ ಹಣಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಕುಟುಂಬಕ್ಕೂ ಹಾಗೂ ಕಲ್ಗುಟ್ಕರವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಗೆ ಅನುಕೂಲವಾಗುವಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 14 ಮತ್ತು 15 ರ ಪ್ರತಿವಾದಿ ಪರ ಶ್ರೀ ಡಿಜಿಪಿ ರವರಿಂದಃ**

ದಾವಾ ಜಮೀನುಗಳ ಪೈಕಿ 1 ರಿಂದ 4 ರ ಆಸ್ತಿಗಳು ಪೋಲಿಸ್ ಇಲಾಖೆಗೆ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸರಿ. ಸದ್ರಿ ದಾವಾ ಐಟಂ ನಂಬ್ರ 1 ರಿಂದ 4 ಆಸ್ತಿಗಳಲ್ಲ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಹಕ್ಕು ಇದ್ದ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿದ ಪರಿಹಾರದ ಕುರಿತು ನೀವು ಭೂಸ್ವಾಧೀನಾಧಿಕಾರಿಗಳು ಮಾಡಿರುವ ಆದೇಶದ ವಿರುದ್ಧ ಯಾವುದೇ ತಕರಾರರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ 16, 17(ಎ ರಿಂದ ಡಿ ) ಹಾಗೂ 18 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರು ಇರುವ ಕಾರಣ ಪಾಟೀ ಸವಾಲನ್ನು ಇಲ್ಲಾ ಅಂತಾ ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ,ಕಾರವಾರ.**

**ಅಸಲು ದಾವಾ .ನಂಃ 26/2025**

**ಪಿ.ಡಬ್ಲ್ಯೂಃ 1**

**( ಇಂದು ದಿನಾಂಕಃ 06.06.2025 ರಂದು ವಾದಿ ಬ್ಯಾಂಕಿನ ಮ್ಯಾನೇಜರ ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಜಿ .ಎಫ್ .ಎನ್ ರವರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ.

ನಾನು ಈ ದಾವೆಗೆ ಸಂಬಂಧಿಸಿದಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗೊಳಿಸಬೇಕಾಗಿ ಪ್ರಾರ್ಥನೆ.

(1. ಲೆಟರ್ ಆಫ್ ಅತಾರಿಟಿ ನಿಪಿ–1,

2. ಇಂಟ್ರಡಕ್ಷನ್ ಫಾರಂ ನಿಪಿ–2,

3. ಸಾಲದ ಅರ್ಜಿ ನಿಪಿ–3,

4.ಇಂಟ್ರಡಕ್ಷನ್ ಫಾರಂ ನಿಪಿ–4,

5.ಸಾಲ ಅರ್ಜಿ ನಿಪಿ–5,

6. ಇಂಟ್ರಡಕ್ಷನ್ ಫಾರಂ ನಿಪಿ–6,

7. ಸಾಲದ ಅರ್ಜಿ ನಿಪಿ–7,

8. ಇಂಟ್ರಡಕ್ಷನ್ ಫಾರಂ ನಿಪಿ–8,

9.ಇಂಟ್ರಡಕ್ಷನ್ ಫಾರಂ ನಿಪಿ–9,

10.ಸಾಲದ ಅರ್ಜಿ ನಿಪಿ–10,

11.ಸಾಲ ಮಂಜೂರಾತಿ ಪತ್ರ ನಿಪಿ–11,

12. ಐದು ಪ್ರೋನೋಟ್ ಮತ್ತು ಅಂಡರ್ ಟೇಕಿಂಗ್ ಲೆಟರ್ ಗಳನ್ನು ಕ್ರಮವಾಗಿ ನಿಪಿ–12 ರಿಂದ 16,

13. ಜಾಯಿಂಟ್ ಲಯಾಬಲಿಟಿ ಅಗ್ರಿಮೆಂಟ್ ನಿಪಿ–17,

14.ರಿನಿವಲ್ ಲೆಟರ್ ನಿಪಿ–18,

15. ಎರಡು ಲೆಟರ್ ಅಫ್ ರಿವೈವಲ್ ಗಳನ್ನು ನಿಪಿ–19 ಮತ್ತು 20,

16. ವಕೀಲರ ನೋಟಿಸಿನ ಕಚೇರಿ ಪ್ರತಿ ನಿಪಿ –21,

17. ಸ್ಟೇಟಮೆಂಟ್ ಅಫ್ ಅಕೌಂಟ್ ನಿಪಿ–22,

ಆದ್ದರಿಂದ ದಾವೆಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಪಿಜಿಪಿ ರವರು ಕಾಲಾವಾಕಾಶ ಕೋರಿದ್ದರಿಂದ ಕಾಲವಾಕಾಶ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**

(ಈ ದಿನದ ನ್ಯಾಯಾಲಯದ ಆದೇಶದ ಪ್ರಕಾರ ಇಂದು ದಿನಾಂಕಃ 03.06.2025 ರಂದು ಪಿ ಡಬ್ಲ್ಯು-1 ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

ಎಮ್.ವಿ.ಸಿ. ನಂಃ

ಪಿ. ಡಬ್ಲ್ಯೂಃ

( ಇಂದು ದಿನಾಂಕಃ 03.06.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ ರವರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿದ್ದು ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

ನಾನು ಈ ಅರ್ಜಿಗೆ ಸಂಬಂಧಿಸಿದಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

(1.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥನೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಾದ ಶ್ರೀ            ರವರಿಂದಃ</u>**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀ              ರವರಿಂದಃ</u>**

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಗಿದೆ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**(II ಹೆಚ್ಚುವರಿ ಎಂ.ಎ.ಸಿ.ಟಿ.,) ಕಾರವಾರ.**

ಎಂ. ಸಿ. ನಂಃ

ಪಿ.ಡಬ್ಲ್ಯೂಃ

( ಇಂದು ದಿನಾಂಕಃ 03.06.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ ರವರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ.

ನಾನು ಈ ಅರ್ಜಿಗೆ ಸಂಬಂಧಿಸಿದಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

(1.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥನೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ರವರಿಂದಃ**

**ಈ ಪ್ರಕರಣದಲ್ಲಿ ಎದುರುದಾರರು ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.

ಆರೋಪಿ ಈ ದಿನ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಹೇಳಿದ್ದರಿಂದ ಕ್ರಮವನ್ನು ಕೈಬಿಡಲಾಯಿತು.